**<u>ದಿನಾಂಕ 10.11.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು : 1 ನೇ ಪ್ರತಿವಾದಿ ಪರ ಶ್ರೀ. MVP ವಕೀಲರಿಂದ:</u>**

ನಾನು ಬೆಂಗಳೂರಿನಲ್ಲಿ ಕಬ್ಬಿಣದ ಅಂಗಡಿಯಲ್ಲಿ ರೈಟರ್ ಕೆಲಸ ಮಾಡುತ್ತೇನೆ. ಬೆಂಗಳೂರಿನಲ್ಲಿ ಎಷ್ಟು ವರ್ಷದಿಂದ ವಾಸವಾಗಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು 10 ವರ್ಷಗಳಿಂದ ವಾಸವಾಗಿರುವುದಾಗಿ ನುಡಿಯುತ್ತಾರೆ. ಬೆಂಗಳೂರಿನಲ್ಲಿ ನೀವು ವಾಸವಾಗಿರುವುದರಿಂದ ದಾವಾ ಸ್ವತ್ತು ಯಾರದ್ದು , ಎಲ್ಲಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಯಾವ ಊರಿನಲ್ಲಿ , ಯಾವ ಏರಿಯಾ ದಲ್ಲಿ ಇದೆ ಎಂದು ನಿಮಗೆ ಗೊತ್ತಿಲ್ಲ ಎಂಬ ಹೇಳಿಕೆಗೆ ಸಾಕ್ಷಿದಾರರು ಸಾತನೂರಿನ ಜಯಭೀಮ್ ನಗರದಲ್ಲಿ ಇದೆ ಎಂದು ನುಡಿಯುತ್ತಾರೆ.

1 ರಿಂದ 3 ನೇ ಪ್ರತಿವಾದಿಗಳು ನಿಮಗೆ ಎಷ್ಟು ವರ್ಷಗಳಿಂದ ಪರಿಚಯ ಎಂಬ ಪ್ರಶ್ನೆಗೆ ಸಾಕ್ಷಿದಾರರು ಬಾಲ್ಯದಿಂದಲೂ ಗೊತ್ತು ಎಂದು ನುಡಿಯುತ್ತಾರೆ. ನೀವು ಊರು ಬಿಟ್ಟು ಸುಮಾರು ವರ್ಷಗಳಾಗಿರುತ್ತದೆ ಹಾಗೂ ನೀವು ಬೆಂಗಳೂರಿನ ಕೆಂಗೇರಿಯಲ್ಲಿ ದಿನಸಿ ವ್ಯಾಪಾರ ಮಾಡುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ ಮಹದೇವಸ್ವಾಮಿಯವರ ಜಾಗ , ಪಶ್ಚಿಮಕ್ಕೆ ಮಂಟಯ್ಯ , ರಾಜು ರವರ ಜಮೀನು , ಉತ್ತರಕ್ಕೆ 1 ನೇ ಪ್ರತಿವಾದಿಯ ಜಾಗ , ದಕ್ಷಿಣಕ್ಕೆ ಮರಿಸ್ವಾಮಿಯವರ ಜಾಗ ಇರುತ್ತದೆ. ದಾವಾ ಸ್ವತ್ತಿನ ಮೂಲ ಖಾತೆ ನಂ. 166 ಆಗಿರುತ್ತದೆ. ಅದರಲ್ಲಿ 3 ಪೋಡಿಗಳಾಗಿರುತ್ತದೆ. ಸರ್ವೆ ನಂ. 166/1 ರ ವಿಸ್ತೀರ್ಣ ಗೊತ್ತಿಲ್ಲ , ಅದರಲ್ಲಿ ನಮ್ಮ ಪೂರ್ವಜರು 4 ಗುಂಟೆಯನ್ನು ಬಸವಲಿಂಗಯ್ಯ ನವರಿಗೆ ಮಾರಾಟ ಮಾಡಿರುತ್ತಾರೆ. ಸರ್ವೆ ನಂ. 166/2 ರ ವಿಸ್ತೀರ್ಣ ಗೊತ್ತಿಲ್ಲ , ಅದು ನನ್ನ ತಂದೆಯ ಹೆಸರಿನಲ್ಲಿತ್ತು , ನನ್ನ ತಂದೆ ಪೌತಿಯಾದ ಮೇಲೆ ನನ್ನ ತಂದೆಯ ಹೆಸರಿನಿಂದ ನನ್ನ ಹೆಸರಿಗೆ ಖಾತೆ ಬದಲಾಯಿಸಿಕೊಂಡಿರುತ್ತೇನೆ. ಸರ್ವೆ ನಂ. 166/3 ರಲ್ಲಿ ವಿಸ್ತೀರ್ಣ ಗೊತ್ತಿಲ್ಲ , ಅದು ನನ್ನ ಚಿಕ್ಕಪ್ಪ ನಿಗೆ ಸೇರಿರುತ್ತದೆ. ಸರ್ವೆ ನಂ. 166/4 ನನ್ನ ಚಿಕ್ಕಪ್ಪ ಜಯರಾಮು ರವರಿಗೆ ಸೇರಿರುತ್ತದೆ. ಸರ್ವೆ ನಂ. 166/5 ರಲ್ಲಿ ವಿಸ್ತೀರ್ಣ 23 ಗುಂಟೆ ಆಗಿದ್ದು , ಅದು ನಮ್ಮ ತಂದೆ ತೀರಿಕೊಂಡ ಮೇಲೆ ಪೌತಿ ಆಧಾರದ ಮೇಲೆ ಬಂದಿರುತ್ತದೆ . ಈ ದಾವೆಯನ್ನು ಸರ್ವೆ ನಂ. 166/2 ರ ಸಂಬಂಧ ಹಾಕಿರುತ್ತೇನೆ.

ದಾವಾ ಸ್ವತ್ತಿನ ಬಗ್ಗೆ ಸರಿಯಾದ ಮಾಹಿತಿ ಇಲ್ಲದೇ , ಯಾವ ಸ್ವತ್ತಿನ ಸಂಬಂಧ ಹಾಕಿರುತ್ತೇನೆ ಎಂದು ಗೊತ್ತಿಲ್ಲದೇ ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ. 166/1 ರಲ್ಲಿ 4 ಗುಂಟೆ ಸ್ವತ್ತನ್ನು ಬಸವಲಿಂಗಯ್ಯ ಮತ್ತು ಅವರ ಅಣ್ಣ ತಮ್ಮಂದಿರು ಮಸ್ತಾನ್ ಸಾಬ್ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿದಾರರು ನಮ ಪೂರ್ವಜರಿಂದ ಖರೀದಿ ಮಾಡಿರುವುದಾಗಿ ನುಡಿಯುತ್ತಾರೆ. ಸರ್ವೆ ನಂ. 166/1 ಮತ್ತು 166/2 ಎಲ್ಲಿದೆ ಎಂದು ನಿಮಗೆ ಸರಿಯಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 166/2ರ ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ , ಉತ್ತರಕ್ಕೆ ಪ್ರತಿವಾದಿ 2 ಮತ್ತು 3 ರವರ ಮನೆ ಇದೆ ಎಂದರೆ ಸರಿಯಲ್ಲ , ಪಶ್ಚಿಮಕ್ಕೆ ಎಂದು ನುಡಿಯುತ್ತಾರೆ ಹಾಗೂ ರಾಜೇಶ್ ರವರ ಜಮೀನು ಸರ್ವೆ ನಂ. 166/1 ಇದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ಮರಿಸ್ವಾ ಮಿಯವರ ಜಾಗ ಇರುತ್ತದೆ , ದಕ್ಷಿಣಕ್ಕೆ ರಸ್ತೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ನಿಮಗೆ ಯಾವುದೇ ಅಧಿಕಾರ ಇಲ್ಲದಿದ್ದರೂ ಸಹ ಪ್ರತಿವಾದಿ1 ರಿಂದ 3 ರವಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3 ರವರು ಕ್ರಯದಾರರಾಗಿದ್ದು ಅವರ ಬಳಿ ನೀವು ದಾವಾ ಸ್ವತ್ತು ತನ್ನದು ಎಂದು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸರ್ಕಾರದಿಂದ ಪಡೆದಂತಹ ಜಾಗಕ್ಕಿಂತ ಹೆಚ್ಚಿ ನ ಜಾಗದಲ್ಲಿ ಪ್ರತಿವಾದಿಗಳು ಮನೆ ಕಟ್ಟಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರಿಂದ 3 ರವರ ಮೇಲೆ ದುರುದ್ದೇಶದಿಂದ ಸುಳ್ಳು ದಾವೆಯನ್ನು ಹಾಕಿರುತ್ತೀರಿ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ